

**ಕೆಲವೊಮ್ಮೆ ಸಾವಿನ ನಂತರವೂ ಮನುಷ್ಯನ ದೇಹಕ್ಕೆ ಅವಮಾನ ಆಗುವ ಸಾಧ್ಯತೆಯಿರುತ್ತದೆ. ಅದು ಅವನಿಗೆ ಗೊತ್ತಾಗುವುದಿಲ್ಲ ಬಿಡಿ. ಆದರೆ ಬದುಕಿರುವಾಗ ಅವಮಾನಗಳನ್ನು ನಿಭಾಯಿಸುವುದು ಅಷ್ಟು ಸುಲಭವೇನಲ್ಲ.**

ಉಪ್ಪು ಸರಿಯಿದೆಯಾ ಎನ್ನುವವರೆಗೂ ತಾವೇ ಮೇಲ್ವಿಚಾರಣೆ ಮಾಡಿ ಮದುವೆ ಹೆಣ್ಣಿನ ಅಪ್ಪ ಅಮ್ಮನ ತಲೆಬಿಸಿ ಕಡಿಮೆ ಮಾಡುತ್ತಿದ್ದರು. ಮದುವೆಗೆ ಛತ್ರ ಹುಡುಕುವ ಮೊದಲು 'ಕಮಲಮ್ಮ ಸಿಕ್ತಾರಾ ನೋಡ್ಕೊಳ್ಳಿ' ಎನ್ನುವುದು ನಮ್ಮ ಕುಟುಂಬದಲ್ಲಿ ಒಂದು ರೀತಿ ಗಾದೆಮಾತಿನಂತೇ ಆಗಿಬಿಟ್ಟಿತ್ತು. ಮದುವೆ ಮನೆಗಳಲ್ಲಿ ನೀವು ಗಮನಿಸಿರಬಹುದು, ಗಂಡು ಹೆಣ್ಣಿಗೆ ತಾಳಿ ಕಟ್ಟುವ ಸಂದರ್ಭದಲ್ಲಿ ಚೋಲಿ ಮತ್ತು ಮಾರುದ್ದ ಹೂಮಾಲೆಯಿಂದ ಆವೃತವಾಗಿ ಆನೆ ಸೊಂಡಿಲಿನಂತೆ ಭಾರವಾಗಿರುವ ಹೆಣ್ಣಿನ ಜಡೆಯನ್ನು ಎತ್ತಿ ಹಿಡಿಯಲು ಒಂದಿಬ್ಬರು ಹೆಂಗಸರು ಹಿಂದೆ ನಿಂತಿರುತ್ತಾರೆ. ಹೀಗೇ ಯಾವುದೋ ಮದುವೆಯಲ್ಲಿ ಕಮಲಮ್ಮ ಯಾವುದೋ ಮದುವೆ ಹೆಣ್ಣಿನ ಜಡೆಯನ್ನು ಎತ್ತಿ ಹಿಡಿದಿದ್ದರಂತೆ. ಆಗ ಇನ್ನೊಬ್ಬರು ಯಾರೋ ಸಂಬಂಧಿಕರು, 'ಕಮಲಮ್ಮ ಬರೀ ಬೇರೆಯೋರ ಮಕ್ಳದ್ದೇ ಜಡೆ ಎತ್ತಿ ಹಿಡಿಯೋದಾಯ್ತು' ಎಂದು ಹೇಳಿಬಿಟ್ಟಿದ್ದಾರೆ. ಈ ಅವಮಾನಕರ ಮಾತುಗಳ ಶಕ್ತಿ ಎಷ್ಟಿರುತ್ತದೆಂದರೆ ಅದು ಗಟ್ಟಿಮೇಳದ ಸದ್ದು, ಹುಡುಗ–ಹುಡುಗಿಯರ ಗೆಳೆಯರ ಕಿರುಚಾಟ, ಭಟ್ಟರ ನೂರಿಪ್ಪತ್ತು ಡೆಸಿಬಲ್ ಮಂತ್ರ ಇವೆಲ್ಲವನ್ನೂ ಮೀರಿ ಕಮಲಮ್ಮನ ಕಿವಿಗೆ ರಪ್ಪೆಂದು ಅಪ್ಪಳಿಸಿತ್ತು. ತನ್ನ ಮಗಳಿಗೆ ಮೂವತ್ತೊಂದಾದರೂ ಇನ್ನೂ ಮದುವೆಯಾಗಿಲ್ಲ ಎಂಬ ಕಾರಣಕ್ಕೇ ಪಾಪ ಅವರು ಇದ್ದಬದ್ದ ಮದುವೆಗಳಿಗೆಲ್ಲಾ ಆಸೆಯಿಂದ ಹೋಗುತ್ತಿದ್ದರೋ ಅಥವಾ ಅವರಿಗೆ ನಿಜವಾಗಲೂ ಮದುವೆಯೊಂದನ್ನು ಸುಸೂತ್ರವಾಗಿ ನೆರವೇರಿಸುವುದರಲ್ಲಿ ಆಸಕ್ತಿಯಿತ್ತೋ ಗೊತ್ತಿಲ್ಲ. ಒಟ್ಟಿನಲ್ಲಿ ಈ ಅವಮಾನದ ಮಾತನ್ನು ಕೇಳಿಸಿಕೊಂಡವರು ಊಟವನ್ನೂ ಮಾಡದೇ ಆ ಮದುವೆಯಿಂದ ಅರ್ಧಕ್ಕೇ ಹೊರಟುಹೋದರು. ಅದಾದ ಮೇಲೆ ಕಮಲಮ್ಮ ಯಾವುದೇ ಮದುವೆಗಳಿಗೂ ಹೋಗುವುದಿಲ್ಲ ಎಂದು ನಿರ್ಧರಿಸಿದರು.

ಇದಾಗಿ ಎರಡು ವರ್ಷಕ್ಕೆ ಅವರ ಮಗಳೇ ಮದುವೆಗೆ ಒಪ್ಪಿದಳಾದರೂ ಆ ಮದುವೆಗೂ ಅವರು ಬರಲಿಲ್ಲ, ಎಲ್ಲಾ ಅವರ ಗಂಡನೇ ನಿಭಾಯಿಸಿದರು. ನಮ್ಮ ಕುಟುಂಬದ ಮದುವೆಗಳಲ್ಲಿ ಸಣ್ಣಪುಟ್ಟ ಎಡವಟ್ಟುಗಳಾದರೆ ಈಗಲೂ 'ಛೇ, ಕಮಲಮ್ಮ ಇದ್ದಿದ್ರೆ ಹಿಂಗಾಗ್ತಿರ್ಲಿಲ್ಲ' ಎಂದು ಎಲ್ಲರೂ ನೆನಪಿಸಿಕೊಳ್ಳುತ್ತಾರೆ. ಒಂದು ಅವಮಾನದ ವಾಯಿದೆ ಇಡೀ ಜೀವಮಾನ ಇರುತ್ತದೆಂದರೆ ಅಚ್ಚರಿಯೇ ಆಗುತ್ತದೆ. ಅಷ್ಟಕ್ಕೂ ಆ ಸಂಬಂಧಿಕರು ಅದನ್ನು ಕುಹಕದಲ್ಲೇ ಹೇಳಿದ್ದರೆನ್ನುವುದು ಯಾರಿಗೆ ಗೊತ್ತು? ಕನಿಕರದಲ್ಲೂ ಹೇಳಿರಬಹುದಲ್ಲವೇ? ಬಹುಶಃ ನಮ್ಮ ಮನಸ್ಥಿತಿಯ ಆಧಾರದ ಮೇಲೆ ಕೆಲವು ವಾಕ್ಯಗಳು ಮಾಮೂಲಿಯಾಗಿಯೂ ಇನ್ನು ಕೆಲವು ವಾಕ್ಯಗಳು ಅವಮಾನದಂತೆಯೂ ಕೇಳಿಸುತ್ತವೇನೋ.

ಅವಮಾನಗಳನ್ನು ಜಗತ್ತಿನಲ್ಲಿ ವೈಯಕ್ತಿಕ ಅವಮಾನ ಮತ್ತು ಸಾಮೂಹಿಕ ಅವಮಾನ ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಈಗ ಪರೀಕ್ಷೆಯಲ್ಲಿ ನೀವು ಬರೆದ ಉತ್ತರಪತ್ರಿಕೆಯನ್ನು ನಿಮ್ಮ ಕೈಯಲ್ಲೇ ಇಡೀ ಕ್ಲಾಸಿನೆದುರು ಓದಿಸಿದಾಗ ನಿಮಗಾಗುವ